# ಕಾರ್ಯನೀತಿ ಸಂಕ್ಷೇಪ #1

iihs™
INDIAN INSTITUTE FOR HUMAN SETTLEMENTS

**ಭಾರತದ ನಗರಗಳ ಆರ್ಥಿಕತೆ**

## ಉದ್ಯೋಗ ಸೃಷ್ಟಿ ಹಾಗೂ ಬೆಳವಣಿಗೆಯ ಪೋಷಣೆ



ಭಾರತದ ನಗರ ಪ್ರದೇಶಗಳನ್ನು ಪ್ರಸ್ತುತದಲ್ಲಿ, ಬೆಳವಣಿಗೆಯ ಪ್ರವರ್ತಕರಾಗಿಯೂ, ಅದರಲ್ಲಿ ಉತ್ಪತ್ತಿಯಾದ ಹೆಚ್ಚುವರಿ ಗಳಿಕೆಯನ್ನು, ಗ್ರಾಮೀಣ ಹಾಗೂ ನಗರದ ಬಡಜನರನ್ನು ಗುರಿಯಾಗಿಸಿದ ಮರುವಿತರಣಾ ಯೋಜನೆಗಳಲ್ಲಿ ಹೂಡಿಕೆ ಮಾಡಲು ಸಾಧ್ಯವೆನ್ನುವಂತೆ ಕಲ್ಪಿಸಿಕೊಳ್ಳಲಾಗಿದೆ.  ಮಧ್ಯಮಾವಧಿ ಹಾಗೂ ದೀರ್ಘಾವಧಿಯಲ್ಲಿ ನಡೆಸಿಕೊಂಡು ಹೋಗುವಂತಹ ಬೆಳವಣಿಗೆಯನ್ನು ಸಾಧಿಸಲು, ಬೆಳವಣಿಗೆಯೊಂದಿಗೆ ಉದ್ಯೋಗ ಸೃಷ್ಟಿಯ ಮೇಲೂ ಸ್ಪಷ್ಟ ಗಮನ ನೀಡಬೇಕಾಗುತ್ತದೆ.  ನಮ್ಮಲ್ಲಿರುವ ಬೃಹತ್ ಸಂಖ್ಯೆಯ ಕೌಶಲ್ಯರಹಿತ ಕಾರ್ಮಿಕಶಕ್ತಿಗಾಗಿ ಅವಕಾಶಗಳನ್ನು ಕಲ್ಪಿಸಲು ಹಾಗೂ, ಜೊತೆಜೊತೆಗೇ ಉತ್ಪಾದಕ ಬೆಳವಣಿಗೆಯೊಂದಿಗೆ ಬಡತನವನ್ನು ಕಡಿಮೆ ಮಾಡುವ ಸಲುವಾಗಿ, ಶ್ರಮಾಧಾರಿತ ಬೆಳವಣಿಗೆಯ ಹಾದಿಯನ್ನು ಭಾರತದಲ್ಲಿ ಸಾಧಿಸುವುದು ಅವಶ್ಯಕವಾಗಿದೆ.

ನಗರಗಳು ಈ ಪರಿವರ್ತನೆಯ ಮುಂಚೂಣಿಯಲ್ಲಿರಬೇಕು - ಭವಿಷ್ಯದಲ್ಲಿ, ನಗರ ಪ್ರದೇಶಗಳಿಂದ ಹೆಚ್ಚುವರಿ ಉದ್ಯೋಗಾವಕಾಶಗಳು ಬರಬೇಕಾಗಿದೆ.  ಆದರೆ, ಕಳೆದ ದಶಕದಲ್ಲಿ ಭಾರತದ ಬೆಳವಣಿಗೆಯು ಬಂಡವಾಳಾಧಾರಿತ ಹಾಗೂ ಕೌಶಲ್ಯ-ಕೇಂದ್ರೀಕೃತವಾಗಿದ್ದು, ಸಾಕಷ್ಟು ಉದ್ಯೋಗಾವಕಾಶಗಳಿಗೆ ಅದು ದಾರಿ ಮಾಡಿ ಕೊಡಲಿಲ್ಲ. ಕೈಗಾರಿಕೀಕರಣವನ್ನು ಉತ್ತೇಜಿಸುವ ಮೂಲಕ ಉದ್ಯೋಗಾವಕಾಶಗಳನ್ನು ಕಲ್ಪಿಸಬಲ್ಲ ನಿರಂತರ ಕಾರ್ಯನೀತಿಯ ಯತ್ನಗಳು ಮಾಡಿಯೂ, ಇದು ಎಣಿಸಿದ ಫಲ ನೀಡಲಿಲ್ಲ. ಅಷ್ಟೇ ಅಲ್ಲ, ನಗರ ಪ್ರದೇಶಗಳಲ್ಲಿ ಸೃಷ್ಟಿಯಾದ ಹೊಸ ಉದ್ಯೋಗಗಳೂ ಸಹ, ಅನೌಪಚಾರಿಕ ಸೇವಾ ವಲಯ ಹಾಗೂ ನಿರ್ಮಾಣ ಕ್ಷೇತ್ರದಲ್ಲಿ ಸೃಷ್ಟಿಯಾಗಿವೆ. ಭಾರತದ ನಗರಗಳ ಆರ್ಥಿಕತೆಯ ಸಾಮರ್ಥ್ಯವನ್ನು ತೆರೆದಿಡಲು ಹಾಗೂ ಗ್ರಾಮೀಣ ಪ್ರದೇಶಗಳಿಗೆ ಪ್ರಯೋಜನಗಳನ್ನು ಒದಗಿಸಲು, ನಗರದಲ್ಲಿನ ಉದ್ಯೋಗಾವಕಾಶಗಳ ಮೇಲೆ ಗಮನ ಹರಿಸುವುದು ಅತ್ಯಗತ್ಯವಾಗಿದೆ.

## ಪ್ರಮುಖ ಪ್ರವೃತ್ತಿಗಳು

### 2011 ರವರೆಗಿನ ಅಂಕಿ-ಅಂಶಗಳ ಪ್ರಕಾರ, ಭಾರತದ 32% ಜನಸಂಖ್ಯೆಯು ನಗರ ಪ್ರದೇಶಗಳಲ್ಲಿ ಜೀವಿಸುತ್ತಾರೆ.

ಸ್ವಾತಂತ್ರ ಸಮಯದಿಂದ, ಇದೇ ಮೊದಲ ಬಾರಿಗೆ ಕಳೆದ ದಶಕದಲ್ಲಿ, ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿ ಜನರ ಸಂಖ್ಯೆ ಹೆಚ್ಚಾಯಿತು – ಇದಕ್ಕೆ ಮೂಲ ಕಾರಣ, ಗ್ರಾಮೀಣದಿಂದ ನಗರ ಪ್ರದೇಶಗಳೆಂದು ಮರುವರ್ಗೀಕರಣವಾದ ವಸಾಹತುಗಳು.  ನಗರೀಕರಣದ ಉದಯೋನ್ಮುಖ/ಹೊರಹೊಮ್ಮುತ್ತಿರುವ ಸ್ವರೂಪದ ಮೇಲೆ ಇದು ಪ್ರಭಾವ ಬೀರಲಿದೆ, ಏಕೆಂದರೆ, 1,00,000ಕ್ಕೂ ಕಡಿಮೆ ಜನಸಂಖ್ಯೆ ಇರುವ ಸಣ್ಣ ಹಾಗೂ ಮಧ್ಯಮ ನಗರಗಳಲ್ಲಿ ಮೂರನೆಯ ಒಂದು ಭಾಗದ ನಗರ ನಿವಾಸಿಗಳು ವಾಸಿಸುತ್ತಾರೆ.

### 2012ರ ಒಟ್ಟಾರೆ ಉತ್ಪತ್ತಿಯ 55%ವು ನಗರಗಳ ಕೊಡುಗೆಯಾಗಿದೆ

ಸ್ವಾತಂತ್ರದ ಸಮಯದಲ್ಲಿನ ಮೂಲಭೂತ ಕೃಷಿ-ಆಧಾರಿತ ಆರ್ಥಿಕತೆಯಿಂದ, ಪ್ರಸ್ತುತ ಬಹುತೇಕ ಸೇವಾಧಾರಿತ ಆರ್ಥಿಕತೆಯಾಗಿ ಭಾರತೀಯ ಅರ್ಥವ್ಯವಸ್ಥೆಯು ರಚನಾತ್ಮಕ ರೂಪಾಂತರವನ್ನು ಹೊಂದಿದೆ. 1991ರಲ್ಲಿ ನಡೆದ ಆರ್ಥಿಕ ಉದಾರೀಕರಣದಿಂದಾಗಿ, ಭಾರತದ ಆರ್ಥಿಕ ಬೆಳವಣಿಗೆಯು ಉತ್ಪಾದನೆ, ನಿರ್ಮಾಣ ಹಾಗೂ ಸೇವಾ ವಲಯಗಳಿಂದ ಪ್ರಚೋದನೆಗೊಂಡಿತು.



iihs™
INDIAN INSTITUTE FOR HUMAN SETTLEMENTS

IIHS Bangalore City Campus
No. 197/36, 2nd Main Road
Sadashiva Nagar
Bangalore 560 080. India
T +91 80 6760 6666
www.iihs.co.in | info@iihs.co.in

ಈ ವಲಯಗಳು ಬಹುತೇಕ ನಗರ ಪ್ರದೇಶಗಳಲ್ಲಿ ಇದ್ದು, ಈಗ 2012ರ ಒಟ್ಟಾರೆ ಉತ್ಪತ್ತಿಯ 55 ಪ್ರತಿಶತ ಭಾಗವು ನಗರಗಳಿಂದ ಬಂದಿದೆ (ಕೇಂದ್ರೀಯ ಅಂಕಿಅಂಶಗಳ ಸಂಸ್ಥೆ).

### ಆದರೆ, ಉದ್ಯೋಗದ ಸ್ವರೂಪವು ಅಷ್ಟಾಗಿ ಬದಲಾಗಿಲ್ಲ, ಇದರಿಂದಾಗಿ ಭಾರತೀಯ ಅರ್ಥ ವ್ಯವಸ್ಥೆಯಲ್ಲಿ ರಚನಾತ್ಮಕ ಅಸಾಮರಸ್ಯ ಉಂಟಾಗಿದೆ.

- ಭಾರತವು ಉದ್ಯೋಗರಹಿತ ಬೆಳವಣಿಗೆಯನ್ನು ಕಂಡಿದ್ದು, ಒಟ್ಟಾರೆ ಕಾರ್ಯಪಡೆಯ ಭಾಗವಹಿಸುವಿಕೆಯ ದರಗಳು (ಡಬ್ಲ್ಯುಪಿಆರ್) 1993-94ರಲ್ಲಿದ್ದ 42 ಪ್ರತಿಶತದಿಂದ, ಆರ್ಥಿಕತೆಯ ವೇಗದ ಬೆಳವಣಿಗೆ ಕಂಡ 2011-12ರಲ್ಲಿ 38 ಪ್ರತಿಶತಕ್ಕೆ ಇಳಿಯಿತು.

- ಈ ಅವಧಿಯಲ್ಲಿ ಗ್ರಾಮೀಣ ಡಬ್ಲ್ಯುಪಿಆರ್ ಇಳಿಕೆಯನ್ನು ಕಂಡರೆ, ನಗರ ಡಬ್ಲ್ಯುಪಿಆರ್‌ನಲ್ಲಿ ನಿಯಮಿತವಾದ ಏರಿಕೆಯನ್ನು ಕಂಡಿದೆ.

- ಈ ವಿಷಯವನ್ನು ಕುರಿತಾಗಿ ಮತ್ತಷ್ಟು ಆಳಕ್ಕೆ ಇಳಿದಾಗ, ಗ್ರಾಮೀಣ ಪ್ರದೇಶಗಳಲ್ಲಿ ಇಳಿಕೆಯಾಗಿ, ನಗರ ಪ್ರದೇಶಗಳಲ್ಲಿ ಹೆಚ್ಚಳವಾದ ಮಹಿಳಾ ಡಬ್ಲ್ಯುಪಿಆರ್‌ನಲ್ಲಿನ ಬದಲಾವಣೆಗಳಿಂದಾಗಿ, ಗ್ರಾಮೀಣ ಡಬ್ಲ್ಯುಪಿಆರ್‌ನಲ್ಲಿ ಇಳಿಕೆ ಹಾಗೂ ನಗರದ ಡಬ್ಲ್ಯುಪಿಆರ್‌ನಲ್ಲಿ ಹೆಚ್ಚಳವನ್ನು ಕಂಡಿದೆ.

- ಕಳೆದ ದಶಕದಲ್ಲಿ ಬಹಳಷ್ಟು ಮಟ್ಟಿಗೆ ಕೆಲಸದ ಅನೌಪಚಾರಿಕೀಕರಣ ಉಂಟಾಗಿದೆ, ಹಾಗೂ ಉದ್ಯೋಗದ ಗುಣಮಟ್ಟವು, ವಿಶೇಷವಾಗಿ ಮಹಿಳೆಯರಿಗೆ ಸಂಬಂಧಿಸಿದಂತೆ, ಗಂಭೀರ ಕಳಕಳಿಯ ವಿಷಯವಾಗಿದೆ.

- ಈ ರಾಷ್ಟ್ರೀಯ-ಮಟ್ಟದ ಸಂಖ್ಯೆಗಳು ಗಣನೀಯ ಪ್ರಾದೇಶಿಕ ಹಾಗೂ ವಲಯ-ನಿರ್ದಿಷ್ಟ  ವ್ಯತ್ಯಾಸಗಳನ್ನು ಕಂಡಿವೆ: 2004ರಿಂದ, ಕೃಷಿ-ಆಧಾರಿತ ಉದ್ಯೋಗಗಳು ಕಡಿಮೆಯಾಗುತ್ತಿದ್ದು, ಉದ್ಯೋಗದಲ್ಲಿನ ಹೆಚ್ಚಳವು ಬಹುತೇಕ ಮಟ್ಟಿಗೆ ನಿರ್ಮಾಣ ಹಾಗೂ ಸೇವಾ ವಲಯಗಳಿಂದ ಉಂಟಾಗಿದೆ.

## ಪ್ರಸ್ತುತ ಕಾರ್ಯನೀತಿಯ ಚೌಕಟ್ಟು ಹಾಗೂ ಇತಿಮಿತಿಗಳು

ನಗರ ಆರ್ಥಿಕ ಅಭಿವೃದ್ಧಿಯನ್ನು ಕುರಿತಾದ ನಿರ್ಣಯಗಳನ್ನು ಬಹುತೇಕ ರಾಜ್ಯ ಸರ್ಕಾರಗಳು ಹಾಗೂ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಗಳು ಕೈಗೊಳ್ಳುತ್ತಿದ್ದು, ನಗರಾಡಳಿತ ಸಂಸ್ಥೆಗಳು ಇದರಲ್ಲಿ ಸೀಮಿತ ಪಾತ್ರವನ್ನು ವಹಿಸುತ್ತವೆ. ಕೇಂದ್ರ ಪ್ರಾಯೋಜಿತ ಯೋಜನೆಗಳು ಹಾಗೂ ಕಾರ್ಯಕ್ರಮಗಳ ಮೂಲಕ ಕಾರ್ಯನೀತಿಯ ಉದ್ದೇಶಗಳು ಹಾಗೂ ಆದ್ಯತೆಗಳನ್ನು ಸ್ಥಾಪಿಸುವಲ್ಲಿ/ನಿರೂಪಿಸುವಲ್ಲಿ ಕೇಂದ್ರ ಸರ್ಕಾರವು ತೊಡಗಿದೆ. ಕೇಂದ್ರ ಸರ್ಕಾರದ ಸೂಕ್ತ ಕಾರ್ಯನೀತಿಗಳು ಹಾಗೂ ಅವುಗಳ ಮಿತಿಗಳು ಕೆಳಕಂಡಂತೆ ಇವೆ:
ಎಮ್‌ಒಯುಡಿ ಹಾಗೂ ಎಮ್‌ಒಎಚ್‌ಯುಪಿಎದ ಅಡಿಯಲ್ಲಿ ಜೆಎನ್‌ಎನ್‌ಯುಆರ್‌ಎಮ್‌ನ್ನು 2005ರಲ್ಲಿ ಪ್ರಾರಂಭಿಸಲಾಯಿತು. ನಗರ ಸುಧಾರಣೆಯನ್ನು ಸಾಧಿಸಿ, ಮೂಲಭೂತ ವ್ಯವಸ್ಥೆಗಳನ್ನು ಒದಗಿಸುವ ಮೂಲಕ ನಗರಗಳಲ್ಲಿನ ಉತ್ಪಾದಕತೆಯ ತೊಡಕುಗಳನ್ನು ತೆಗೆಯುವ, ಹಾಗೂ ನಗರದ ಬಡವರಿಗೆ ಮೂಲಭೂತ ಸೇವೆಗಳನ್ನು ನೀಡುವ ಮುಖ್ಯ ಉದ್ದೇಶವನ್ನು ಇದು ಹೊಂದಿತ್ತು. ಜೆಎನ್‌ಎನ್‌ಯುಆರ್‌ಎಮ್‌ನ ಪ್ರಮುಖ ಮಿತಿಗಳಲ್ಲಿ ಒಂದು, ಅನುದಾನದ ಹೆಚ್ಚಿನ ಮೊತ್ತವನ್ನು ಕೇವಲ 63 ಆಯ್ದ ದಶಲಕ್ಷಕ್ಕೂ ಮಿಗಿಲಾದ ನಗರಗಳು ಹಾಗೂ ಕಾರ್ಯತಾಂತ್ರಿಕ ಪ್ರಾಮುಖ್ಯತೆಯನ್ನು ಹೊಂದಿದ ನಗರಗಳತ್ತ ನಿರ್ದೇಶಿಸಲಾಗಿದ್ದು, ಸಣ್ಣ ನಗರ ಕೇಂದ್ರಗಳನ್ನು ನಿರ್ಲಕ್ಷ ಮಾಡಿದೆ.  ಜೊತೆಗೆ, ಉದ್ಯೋಗವನ್ನು ಕುರಿತಾದ ವಿಷಯಗಳನ್ನು ಅದು ಸ್ಪಷ್ಟವಾಗಿ ಜೆಎನ್‌ಎನ್‌ಯುಆರ್‌ಎಮ್ ಉದ್ದೇಶಿಸಿಲ್ಲ.

ಜೆಎನ್‌ಎನ್‌ಯುಆರ್‌ಎಮ್‌ನಂತಲ್ಲದೆ, ದೀನ್ ದಯಾಲ್ ಉಪಾಧ್ಯಾಯ ಅಂತ್ಯೋದಯ ಯೋಜನೆಯನ್ನು (ಡೇ) ಎಮ್‌ಒಎಚ್‌ಯುಪಿಎ ಹಾಗೂ ಎಮ್‌ಒಆರ್‌ಡಿಯಿಂದ 2014ರಲ್ಲಿ  ಪ್ರಾರಂಭಿಸುವುದಾಗಿ ಘೋಷಿಸಲಾಯಿತು ಹಾಗೂ ಅದರ ಅಡಿಯಲ್ಲಿ ಎಲ್ಲ 4,041 ಶಾಸನಾತ್ಮಕ ಪಟ್ಟಣಗಳನ್ನೂ ಸೇರ್ಪಡೆ ಮಾಡಲಾಯಿತು. ಬಡವರಿಗಾಗಿ ಕೌಶಲ್ಯ ತರಬೇತಿ, ಸ್ವಯಂ-ಉದ್ಯೋಗ ಹಾಗೂ ಸ್ವಸಹಾಯ ಸಂಘಗಳ ಸ್ಥಾಪನೆಗಾಗಿ ಆರ್ಥಿಕ ನೆರವನ್ನು ನೀಡುವ ಸಲುವಾಗಿ ಬಡವರಿಗೆ ಕೌಶಲ್ಯ ತರಬೇತಿಯನ್ನು ನೀಡುವ ಮೂಲಕ ನಗರ ಹಾಗೂ ಗ್ರಾಮೀಣ ಬಡತನವನ್ನು ಉದ್ದೇಶಿಸುವ ಮುಖ್ಯ ಗುರಿಯನ್ನು ಅದು ಹೊಂದಿದೆ.  ಕೌಶಲ್ಯಗಳ ಪ್ರಮಾಣೀಕರಣವನ್ನು ಪಡೆದ ಕಾರ್ಮಿಕರಿಗಾಗಿ ಸೂಕ್ತ ಸಂಖ್ಯೆಯ ಸೂಕ್ತ ಕೆಲಸಗಳನ್ನೂ ಸೃಷ್ಟಿಸುವುದೂ ಮುಖ್ಯವಾಗುತ್ತದೆ.  ನಗರದ ಬಡವರ ವಾಣಿಜ್ಯೋದ್ಯಮ ಚಟುವಟಿಕೆಗೆ ನೆರವಾಗಲು ಸ್ವಯಂ-ಉದ್ಯೋಗ ಹಾಗೂ ಸ್ವಸಹಾಯ ಗುಂಪುಗಳ ಸ್ಥಾಪನೆಗೆ ನೀಡುವ ಆರ್ಥಿಕ ನೆರವು ಸಾಲದೆ ಇರಬಹುದು.

ಕೈಗಾರಿಕಾ ವಲಯಗಳು, ರಾಷ್ಟ್ರೀಯ ಹೂಡಿಕೆ ಹಾಗೂ ಉತ್ಪಾದನಾ ವಲಯಗಳು (ಎನ್‌ಐಎಮ್‌ಝೆಡ್‌ಗಳು), ಹಾಗೂ ವಿಶೇಷ ಆರ್ಥಿಕ ವಲಯಗಳು (ಎಸ್‌ಇಜೆಡ್‌ಗಳು).  ಕೈಗಾರಿಕಾ-ಪ್ರಧಾನ ಆರ್ಥಿಕ ಬೆಳವಣಿಗೆ ಅನುವು ಮಾಡಿ, ರಫ್ತು ಹಾಗೂ ಹೂಡಿಕೆಯನ್ನು ಉತ್ತೇಜಿಸಿ, ಉದ್ಯೋಗಗಳನ್ನು ಸೃಷ್ಟಿಸುವ ಕಾರ್ಯನೀತಿಗಳನ್ನು ವಾಣಿಜ್ಯ ಹಾಗೂ ಕೈಗಾರಿಕಾ ಮಂತ್ರಾಲಯವು (ಎಮ್‌ಒಸಿಐ) ರೂಪಿಸುತ್ತದೆ.  ಆದರೆ, ಪ್ರಸ್ತುತ ಸಂದರ್ಭದಲ್ಲಿ, ರಫ್ತು-ಆಧಾರಿತ ಕೈಗಾರಿಕೀಕರಣದ ಪೂರ್ವ-ಏಷಿಯಾದ ಮಾದರಿಯನ್ನು ಅಳವಡಿಸಿಕೊಳ್ಳುವುದು ಪರಿಣಾಮಕಾರಿಯಾಗಿ ಇಲ್ಲದೆ ಇರಬಹುದು, ಕಾರಣ, ಜಾಗತಿಕ ಬೇಡಿಕೆಯಲ್ಲಿ ಉಂಟಾಗಿರುವ ಇಳಿಕೆ.  ಜೊತೆಗೆ, ಬೃಹತ್ ಕೈಗಾರಿಕಾ ಕ್ಷೇತ್ರಗಳಲ್ಲಿನ ಔಪಚಾರಿಕ ವಲಯದಲ್ಲಿನ ಉದ್ಯೋಗಗಳು ಒಟ್ಟಾರೆ ಉದ್ಯೋಗಗಳ ಕೇವಲ ಸಣ್ಣ ಪ್ರಮಾಣವನ್ನು ಪ್ರತಿನಿಧಿಸುತ್ತದೆ 2005ರಲ್ಲಿ, 50 ನೌಕರರಿಗಿಂತ ಕಡಿಮೆ ಇರುವ ಕಿರು ಹಾಗೂ ಸಣ್ಣ ಉದ್ಯಮಗಳಲ್ಲಿ 84 ಪ್ರತಿಶತದಷ್ಟು ಉತ್ಪಾದನಾ ಕಾರ್ಯಪಡೆಯು ಕೇಂದ್ರೀಕೃತವಾಗಿತ್ತು (ಹಸನ್ ಆಂಡ್ ಜಾನ್‌ಡಾಕ್ 2010).

## ಪ್ರಮುಖ ಕ್ರಮಗಳು

ಸ್ಥಿರ ಬೆಳವಣಿಗೆಯನ್ನು ಸಾಧಿಸಲು ನಗರ ಪ್ರದೇಶಗಳಲ್ಲಿನ ಉದ್ಯೋಗಗಳತ್ತ ಗಮನ ಹರಿಸಬೇಕು. ಈ ನಿಟ್ಟಿನಲ್ಲಿ, ಕೆಳಕಂಡ ಕಾರ್ಯನೀತಿ ಕ್ರಮಗಳನ್ನು ಶಿಫಾರಸ್ಸು ಮಾಡಲಾಗಿದೆ:

### 1. ಕೇವಲ ಕೈಗಾರಿಕಾ ಪ್ರದೇಶಗಳ ಮಾತ್ರ ಗಮನ ಹರಿಸದೆ, ಪ್ರಸ್ತುತ ನಗರಗಳಲ್ಲಿನ ಉದ್ಯೋಗ-ಕೇಂದ್ರೀಕೃತ ಬೆಳವಣಿಗೆಯ ಮೇಲೆ ಗಮನ ನೀಡುವುದು

ನಗರದ ಜನಸಂಖ್ಯೆಯ ಮೂರನೆಯ ಒಂದು ಭಾಗವು ಸಣ್ಣ ಹಾಗೂ ಮಧ್ಯಮ ಗಾತ್ರದ ಪಟ್ಟಣಗಳಲ್ಲಿ ವಾಸಿಸುವುದರಿಂದ, ಇದು ವಿಶೇಷವಾಗಿ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.  ಈ ನಗರಗಳ ಮೇಲೆ ಉಂಟಾಗುವ ಪ್ರಭಾವದ ಸಂಭಾವನೆಯು ಅಧಿಕ, ಕಾರಣ ಭವಿಷ್ಯದ ಬೆಳವಣಿಗೆ ನಡೆಯುವ ಸಾಧ್ಯತೆ ಇರುವುದು ಈ ವಸಾಹತುಗಳಲ್ಲೇ.  ಇದು ಗ್ರಾಮೀಣ ಅರ್ಥ ವ್ಯವಸ್ಥೆಗೂ ಸಂಪರ್ಕಗಳಾಗಿ ಪರಿಣಮಿಸುತ್ತವೆ.  ಇದನ್ನು ಸಾಧಿಸುವ ಸಲುವಾಗಿ, ಕೆಳಕಂಡ ಸಂಪರ್ಕ-ಸಹಿತ ಕ್ರಮಗಳನ್ನು ರಾಜ್ಯ ಸರ್ಕಾರಗಳು ಗಮನ ಹರಿಸಬೇಕಾಗುತ್ತದೆ:

- ಮೂಲಭೂತ ವ್ಯವಸ್ಥೆಗಳ ತೊಡಕುಗಳು, ಅದರಲ್ಲೂ ನಗರದ ಮೂಲಭೂತ ವ್ಯವಸ್ಥೆಗಳು, ವಸತಿ, ಹಾಗೂ ಸಾರಿಗೆಯನ್ನು ಉದ್ದೇಶಿಸುವುದು, ಹಾಗೂ, ಕೆಲಸ, ವಸತಿ ಹಾಗೂ ಚಲನಶೀಲತೆಯ ನಡುವಣ ಸಂಪರ್ಕಗಳನ್ನು ಕುರಿತಾಗಿ ಚಿಂತನೆ ಮಾಡುವುದು.

- ವಿಶೇಷವಾಗಿ ಸಣ್ಣ ಹಾಗೂ ಮಧ್ಯಮ ಗಾತ್ರದ ಪಟ್ಟಣಗಳಿಗೆ ಸಂಪರ್ಕ ಸಾಧನ ಹಾಗೂ ವಿದ್ಯುತ್ ಖಾತರಿ ಪಡಿಸುವುದು. ಗೃಹೋದ್ಯೋಗಗಳ ಕಾರ್ಯನಿರ್ವಹಣೆಗಾಗಿ ಎಲ್ಲ ಮನೆಗಳಿಗೂ ವಿದ್ಯುತ್‌ನ್ನು ಒದಗಿಸುವುದು ವಿಶೇಷವಾಗಿ ಮುಖ್ಯವಾಗುತ್ತದೆ.

- ಪರಿಸರಕ್ಕೆ ದ್ರವತ್ಯಾಜ್ಯಗಳನ್ನು ಬಿಡುಗಡೆ ಮಾಡುವ ಮುನ್ನ ಅದನ್ನು ಸಂಸ್ಕರಣೆ ಮಾಡುವುದನ್ನು ಕುರಿತಾದ ಪಾರಿಸಾರಿಕ ಮಾನದಂಡಗಳ ಕಟ್ಟುನಿಟ್ಟಿನ ಪಾಲನೆ ಹಾಗೂ ಮಾಲಿನ್ಯದ ನೀತಿ-ನಿಯಮಗಳನ್ನು ಕಡ್ಡಾಯವಾಗಿ ಜಾರಿಗೆ ತರುವುದು.

### 2. ಕೈಗಾರಿಕಾ ಬೆಳವಣಿಗೆಯ ಪ್ರಚೋದಕವಾಗಿ ಕಿರು, ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ಸ್ಥಾನೀಯ/ದೇಶೀಯ ಬೇಡಿಕೆಯ ಮೇಲೆ ಗಮನ ಹರಿಸುವುದು

ಬೃಹತ್ ಕೈಗಾರಿಕಾ ಪ್ರದೇಶಗಳು ಹಾಗೂ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುವುದರೊಂದಿಗೆ, ಸರ್ಕಾರವು ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಮೇಲೂ ಗಮನ ಹರಿಸಬೇಕು.  ಪ್ರಸ್ತುತದಲ್ಲಿ, 50 ನೌಕರರಿಗಿಂತ ಕಡಿಮೆ ಇರುವ ಉದ್ಯಮಗಳಲ್ಲಿ, ಕೈಗಾರಿಕ ವಲಯದ 84 ಪ್ರತಿಶತ ಉದ್ಯೋಗಗಳು ಕೇಂದ್ರೀಕೃತವಾಗಿವೆ.  ಆದರೆ, ಹಣಕಾಸಿನ ಲಭ್ಯತೆಯಲ್ಲಿನ ಸಮಸ್ಯೆಗಳು, ಮಾರುಕಟ್ಟೆಗಳಿಗೆ ಲಭ್ಯತೆ ಇಲ್ಲದಿರುವುದು, ಅಸಮರ್ಪಕ ಮೂಲಭೂತ ಸವಲತ್ತುಗಳು, ಕಾರ್ಮಿಕ ಕಾನೂನುಗಳಲ್ಲಿನ ವೈವಿಧ್ಯತೆ ಹಾಗೂ ಅನುಸರಣೆಯನ್ನು ಕುರಿತಾದ ವಿಷಯಗಳು, ಜೊತೆಗೆ ಅತಿಯಾದ ನಿಯಂತ್ರಣಗಳು ಹಾಗೂ ಅಧಿಕಾರಶಾಹಿತ್ವಗಳಿಂದಾಗಿ ಈ ಉದ್ಯಮಗಳು ಕಡಿಮೆ ಉತ್ಪಾದಕತೆಯಿಂದ ಸೊರಗುತ್ತವೆ (ಯೋಜನಾ ಆಯೋಗ 2012). ಕೇಂದ್ರ ಸರ್ಕಾರವು ಮಧ್ಯ ಪ್ರವೇಶಿಸಿ, ಕೈಗಾರಿಕಾ ಬೆಳವಣಿಗೆಯನ್ನು ಪ್ರೋತ್ಸಾಹಿಸಲು ಈ ಕೆಲವು ನಿಯಂತ್ರಣಗಳನ್ನು ಸಡಿಲಗೊಳಿಸಬೇಕಾಗಿದೆ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಅಪಾರ ಉದ್ಯೋಗ ಸೃಷ್ಟಿಯ ಸಾಮರ್ಥ್ಯದಿಂದಾಗಿ ಒದಗುವ ಉತ್ಪಾದಕತೆಯ ಗಳಿಕೆಗಳನ್ನು ಗುರುತಿಸಿ, ಅವರ ಅಗತ್ಯಗಳ ಆಧಾರದ ಮೇಲೆ ನೀಡಲಾಗುವ ಅನುದಾನಿತ ಸಾಲಗಳ ನೆರವಿನೊಂದಿಗೆ, ಹೆಚ್ಚುವರಿ ನೆರವನ್ನು ಸ್ಥಾಪಿಸಬೇಕು.  ಮೂಲಭೂತ ಸವಲತ್ತುಗಳು, ವಸತಿ, ಹಾಗೂ ಸಾರಿಗೆಯ ಮೇಲೆ ಗಮನ ಹರಿಸಿದಾಗ, ಪ್ರಸ್ತುತ ನಗರಗಳಲ್ಲಿನ ಸಣ್ಣ ಉದ್ಯಮಗಳ ಬೆಳವಣಿಗೆಗೆ ಅದು ಪೂರಕವಾಗಿ ಇರುತ್ತದೆ.

ಜೊತೆಗೆ, ರಫ್ತುಗಳನ್ನು ಉತ್ತೇಜಿಸುವುದರೊಂದಿಗೆ, ಭವಿಷ್ಯದ ಬೆಳವಣಿಗೆಯನ್ನು ಗಮನದಲ್ಲಿ ಇಟ್ಟುಕೊಂಡು, ಕೈಗಾರಿಕಾ ಕಾರ್ಯನೀತಿಯು ಪ್ರಮುಖ ಪ್ರಚೋದಕವಾಗಿ ಸ್ಥಳೀಯ/ದೇಶೀಯ ಬೇಡಿಕೆಯ ಮೇಲೆ ಗಮನ ನೀಡಬೇಕು. ಭೌತಿಕ ಸಾರಿಗೆಯ ಮೂಲಭೂತ ಸವಲತ್ತುಗಳಲ್ಲಿನ ಸುಧಾರಣೆ, ರಾಜ್ಯಗಳ ಆದ್ಯಂತ ವ್ಯಾಪಾರ-ವಹಿವಾಟಿನ ವೆಚ್ಚಗಳ ಕಡಿತ, ಹಾಗೂ ದೇಶೀಯ/ಸ್ಥಳೀಯ ಉಳಿತಾಯಗಳನ್ನು ಉತ್ತೇಜಿಸುವ ಮೂಲಕ ಇದನ್ನು ಸುಗಮಗೊಳಿಸಬಹುದು (ರಾಜನ್ 2014).

### 3. ಕಾರ್ಯಪಡೆಯಲ್ಲಿರುವ ಮಹಿಳೆಯರ ಅಗತ್ಯಗಳನ್ನು ಉದ್ದೇಶಿಸುವುದು

ಆರ್ಥಿಕ ವ್ಯವಸ್ಥೆಯ ಒಟ್ಟಾರೆ ಉದ್ಯೋಗ ಪರಿಸ್ಥಿತಿಯ ಪ್ರಮುಖ ಪ್ರಚೋದಕವಾಗಿ ಮಹಿಳಾ ಕಾರ್ಯಪಡೆಯ ಭಾಗವಹಿಸುವಕೆಯಲ್ಲಿ ಉಂಟಾದ ಬದಲಾವಣೆಗಳು ಕಾರ್ಯ ನಿರ್ವಹಿಸುತ್ತವೆ.  ಇತ್ತೀಚಿನ ಪ್ರವೃತ್ತಿಗಳು ಮುಂದುವರಿದಲ್ಲಿ, ನಗರದಲ್ಲಿನ ಕಾರ್ಯಪಡೆಗೆ ಸೇರ್ಪಡೆ ಆಗುವ ಗಣನೀಯ ಸಂಖ್ಯೆಯ ಜನರು ಮಹಿಳೆಯರಾಗುವ ಸಾಧ್ಯತೆ ಇದೆ.  ಹಾಗಾಗಿ, ರಾಜ್ಯ ಸರ್ಕಾರಗಳು ವಿಶೇಷವಾಗಿ ಮಹಿಳೆಯರ ಶಿಕ್ಷಣ ಹಾಗೂ ತರಬೇತಿ ಅಗತ್ಯಗಳ ಮೇಲೆ ಗಮನ ಹರಿಸಬೇಕು, ಹಾಗೂ ನಗರಾಡಳಿತಗಳು/ಸರ್ಕಾರಗಳು ಅವರ ಸುರಕ್ಷತೆಯನ್ನು ಖಚಿತಪಡಿಸಿ, ಮಹಿಳೆಯರು ತಮ್ಮ ಕೆಲಸಗಳಿಗೆ ಹೋಗುವುದನ್ನು ಸುಗಮಗೊಳಿಸುವಲ್ಲಿ ಸಾರಿಗೆ ವ್ಯವಸ್ಥೆಯ ಮಹತ್ವವನ್ನು ಗುರುತಿಸಬೇಕು.  ಕಾರ್ಯಪಡೆಯಲ್ಲಿ ಮಹಿಳೆಯರ ಸೇರ್ಪಡೆಯು, ಸಮನ್ವಯತೆಯನ್ನು ಸಾಧಿಸಲು ಮಾತ್ರವಲ್ಲ, ಬೆಳವಣಿಗೆಯನ್ನು ಸಾಧಿಸಲೂ ಮುಖ್ಯವಾಗುತ್ತದೆ.  ಪೂರ್ವ ಏಷಿಯಾದ ಬೆಳವಣಿಗೆಯ 'ಪವಾಡ'ವು ಬಹುತೇಕವಾಗಿ ಮಹಿಳಾ ಭಾಗವಹಿಸುವಿಕೆಯ ಹೆಚ್ಚಳದ ಜೊತೆಗೆ ಶಿಕ್ಷಣದಲ್ಲಿನ ಸುಧಾರಣೆಗಳಿಂದಲೂ ಪ್ರಚೋದಿಸಲ್ಪಟ್ಟಿದ್ದು, ಇದು ಕಾರ್ಯಪಡೆಯ ಸಂಖ್ಯೆ ಹಾಗೂ ಗುಣಮಟ್ಟಗಳೆರಡರಲ್ಲೂ ಹೆಚ್ಚಳವನ್ನು ಕಂಡಿತು.

## ಉಲ್ಲೇಖಗಳು


- ಆನಂದ್, ಎಸ್., ರೆವಿ, ಎ., ಆಂಡ್ ಕೊಡುಗಂಟಿ, ಜೆ. (2014). ಸಿಟೀಸ್ ಆಸ್ ಎಂಜಿನ್ಸ್ ಆಫ್ ಇನ್‌ಕ್ಲೂಸಿವ್ ಡೆವಲಪ್ಮೆಂಟ್, ಐಐಎಚ್‌ಎಸ್-ಆರ್‌ಎಫ್ ಪೇಪರ್ ಆನ್ ಇಂಡಿಯನ್ ಅರ್ಬನ್ ಇಕಾನಮಿ, ಇಂಡಿಯನ್ ಇನ್ಸ್‌ಟಿಟ್ಯೂಟ್ ಫಾರ್ ಹ್ಯೂಮನ್ ಸೆಟಲ್ಮೆಂಟ್ಸ್.

- ಹಸನ್, ಆರ್. ಆಂಡ್ ಕೆ.ಆರ್. ಜಾನ್‌ಡಾಕ್ (2010).  ದ ಡಿಸ್ಟ್ರಿಬ್ಯೂಷನ್ ಆಫ್ ಫರ್ಮ್ ಸೈಝ್ ಇನ್ ಇಂಡಿಯಾ: ವ್ಹಾಟ್ ಕ್ಯಾನ್ ಸರ್ವೇ ಡಾಟ ಟೆಲ್ ಅಸ್? ಎಡಿಬಿ ಎಕನಾಮಿಕ್ಸ್ ವರ್ಕಿಂಗ್ ಪೇಪರ್ ಸೀರೀಸ್, ಏಷಿಯನ್ ಡೆವಲಪ್ಮೆಂಟ್ ಬ್ಯಾಂಕ್.

- ಪ್ಲಾನಿಂಗ್ ಕಮೀಷನ್ (2012). ರಿಪೋರ್ಟ್ ಆಫ್ ದ ವರ್ಕಿಂಗ್ ಗ್ರೂಪ್ ಆನ್ ಮೈಕ್ರೋ, ಸ್ಮಾಲ್ ಆಂಡ್ ಮೀಡಿಯಮ್ ಎಂಟರ್‌ಪ್ರೈಸಸ್ ಗ್ರೋಥ್ ಫಾರ್ 12ಥ್ ಫೈವ್ ಇಯರ್ ಪ್ಲಾನ್ (2012-17).  12ಥ್ ಫೈವ್ ಇಯರ್ ಪ್ಲಾನ್. ನ್ಯೂದೆಹಲಿ, ಗವರ್ನಮೆಂಟ್ ಆಫ್ ಇಂಡಿಯಾ.

- ರಾಜನ್, ಆರ್. (2014). ಮೇಕ್ ಇನ್ ಇಂಡಿಯ, ಲಾರ್ಜ್ಲಿ ಫಾರ್ ಇಂಡಿಯಾ. ನವದೆಹಲಿ, ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ.